# ದಿ, 8 ರಿಂದ ಹೆಬ್ಬಾಳ : ಶ್ರೀ ಗುಪ್ತಾದೇವಿ ಜಾತ್ರಾಮಹೋತ್ಸವ

ಉಳ್ಳಾಗಡ್ಡಿ-ಖಾನಾಪೂರ:-ಯಮಕನಮರಡಿ:-ಸಮೀಪದ ಹೆಬ್ಬಾಳ ಗ್ರಾಮದ ಶ್ರೀಗುಪ್ತಾದೇವಿ ಜಾತ್ರಾ ಮಹೋತ್ಸವವು ಬುಧವಾರ ದಿ, 8 ರಿಂದ ಶನಿವಾರ ದಿ, 11 ರ ವರೆಗೆ ನಡೆಯಲಿದ್ದು, 8 ರಂದು ಸಕಲವಾಧ್ಯ ಮೇಳದೊಂದಿಗೆ ಗುಪ್ತಾದೇವಿಯ ಉಡಿ ತುಂಬುವ ಕಾರ್ಯಕ್ರಮ, ದಿ, 9 ರಂದು ಭಕ್ತಾಧಿಗಳಿಂದ ದಂಡವತ ಕಾರ್ಯಕ್ರಮ, ದಿ,10 ರಂದು ಅಂಬಲಿ ಕೊಡಗಳ ಮೆರವಣಿಗೆ, ಮದ್ಯಾನ್ಹ ಮಹಾಪ್ರಸಾದ, ದಿ,10 ರಂದು ಗುಪ್ತಾದೇವಿ ಭಕ್ತಾಧಿಗಳಿಂದ ನೈವಧ್ಯ ಅರ್ಪಣೆ, ರಾತ್ರಿ 10 30 ಕ್ಕೆ ಮರಳಿ ಮಿಂಚಿದ ಮುತ್ತೈದೆ, ಸಾಮಾಜಿಕ ನಟಕ, ದಿ,11 ರಂದು ಮುಂಜಾನೆ 8 ಕ್ಕೆ ಓಡುವ ಸ್ಪರ್ಧೆ, 8:30 ಕ್ಕೆ ಸೈಕಲ್ ಸ್ಪರ್ಧೆ,

9 ಕ್ಕೆ ಹಲ್ಲು ಹಚ್ಚದ ಒಂದು ಹೋರಿ, ಒಂದು ಕುದುರೆ ಗಾಡಿ ಸ್ಪರ್ಧೆ, 9:30 ಕ್ಕೆ ಜೊಡು ಕುದುರೆ ಗಾಡಿ ಸ್ಪರ್ಧೆ, 10 ಕ್ಕೆ ಒಂದು ಎತ್ತು ಒಂದು ಕುದುರೆ ಗಾಡಿ ಸ್ಪರ್ಧೆ, 10 : 30 ಕ್ಕೆ ಜೋಡೆತ್ತಿನ ಗಾಡಿ ಸ್ಪರ್ಧೆ, ಜರುಗಲಿವೆ,



## ವಿಶ್ವಗುರು ಬಸವಣ್ಣ ಸಂದೇಶ ಪ್ರಸ್ತುತ ಅಗತ್ಯವೆನಿಸಿದೆ : ಡಾ.ಪ್ರಭಾಕರ ಕೋರೆ

# ಬಸವ ಜಯಂತಿ ನಿಮಿತ್ತ ಬೃಹತ್ ಬೈಕ್ ರ್‍ಯಾಲಿ



ಬೆಳಗಾವಿ 5 : 'ವಿಶ್ವಗುರು ಬಸವಣ್ಣನವರು ಮಾನವೀಯತೆಯನ್ನು ಸಾರಿ ಸಮಾನತೆಯ ಹರಿಕಾರರು. ಅವರ ಸಂದೇಶ ಇಂದಿಗೂ ಲೋಕಮಾನ್ಯವೆನಿಸಿದೆ. ಪ್ರಸ್ತುತ ಯುದ್ಧ ಹಾಗೂ ಜಾತಿಗಳ ಸಂಘರ್ಷದಲ್ಲಿ ಬದುಕುತ್ತಿರುವ ನಮಗೆ ಬಸವಣ್ಣನವರ ವಿಚಾರಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವೆನಿಸಿದೆ' ಎಂದು ಕೆಎಲ್‌ಇ ಕಾರ್ಯಾಧ್ಯಕ್ಷರು ಹಾಗೂ ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಉಪಾಧ್ಯಕ್ಷರಾದ ಡಾ.ಪ್ರಭಾಕರ ಕೋರೆಯವರು ಹೇಳಿದರು.

ಅವರು ಬೆಳಗಾವಿ ಶಿವಬಸವ ನಗರದ ಲಿಂಗಾಯತ ಭವನದಲ್ಲಿ ಬಸವ ಜಯಂತಿ ನಿಮಿತ್ತ ಆಯೋಜಿಸಿದ್ದ ಬೆಳಗಾವಿ ಅಖಿಲ ಭಾರತ ವೀರಶೈವ ಅಂಗಾಯತ ಮಹಾಸಭೆ ಜಿಲ್ಲಾ ಘಟಕ, ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಉತ್ಸವ ಕೇಂದ್ರ ಸಮಿತಿ ಹಾಗೂ ವಿವಿಧ ಲಿಂಗಾಯತ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಬೃಹತ್ ಬೈಕ್ ರ್‍ಯಾಲಿಗೆ ರವಿವಾರ 05-05-2024 ರಂದು ಸಾಯಂಕಾಲ ಚಾಲನೆ ನೀಡಿ ಮಾತನಾಡಿದರು. 'ಇಂದು ನಾವೆಲ್ಲ ಒಳಪಂಗಡಗಳನ್ನು ಮಾಡಿಕೊಂಡು ಹೋರಾಡುತ್ತಿದ್ದೇವೆ ಅದನ್ನು ಬದಿಗೆ ಇಟ್ಟು ಸಾಂಘಿಕವಾಗಿ ಸಮಾಜವನ್ನು ಕಟ್ಟಬೇಕಾಗಿದೆ. ಅಣ್ಣನವರು ಹನ್ನೆರಡನೆಯ ಶತಮಾನದಲ್ಲಿಯೇ ಸಮಾಜದ ಪ್ರಗತಿಗಾಗಿ ಹೋರಾಡಿದರು. ಎಂಟುನೂರು ವರ್ಷಗಳಾದರೂ ಅವರ ವಿಚಾರಗಳು ಲೋಕ ಪೂಜ್ಯವೆನಿಸಿವೆಕೊಂಡಿವೆ. ಇಂದು ದೇಶ ವಿದೇಶದಲ್ಲಿ ಬಸವಣ್ಣನವರ ವಚನಗಳು ಕುರಿತು ಅಧ್ಯಯನಗಳು ನಡೆಯುತ್ತಿವೆ. ಅವರು ಕನ್ನಡ ನಾಡಿನಲ್ಲಿ ಅವತರಿಸಿರುವುದು ನಮ್ಮ ಸೌಭಾಗ್ಯ ನಾಡಿನುದ್ದಗಲಕ್ಕೂ ನಮ್ಮ ಯುವಜನರು ಅವರ ಸಂದೇಶಗಳನ್ನು ಅರಿಯುವಂತಾಗಬೇಕು. ಬಸವ ಜಯಂತಿಯನ್ನು ಅರ್ಥಪೂರ್ಣಗೊಳಿಸಬೇಕು. ಈ ನಿಮಿತ್ತ ಆಯೋಜಿಸಿರುವ ಬೈಕ್ ರ್‍ಯಾಲಿ ಬಸವ ಜಾಗೃತಿಯನ್ನುಂಟುಮಾಡಲೆಂದು' ಡಾ.ಕೋರೆಯವರು ಹಾರೈಸಿದರು.

ಸಾನ್ನಿಧ್ಯ ವಹಿಸಿದ್ದ ಕಾರಂಜಿಮಠದ ಪರಮಪೂಜ್ಯ ಶ್ರೀ ಗುರುಸಿದ್ಧ ಮಹಾಸ್ವಾಮೀಜಿಯವರು ಆಶೀರ್ವಚನ ನೀಡುತ್ತ, 'ಬಸವಣ್ಣನವರ ಮಾನವೀಯತೆ ವಿಚಾರಗಳನ್ನು ಅಳವಡಿಸಿಕೊಳ್ಳುವ ಕೆಲಸ ಮೊದಲು ನಡೆಯಬೇಕಾಗಿದೆ. ನೈತಿಕ ಬದುಕು ನಮ್ಮದಾದರೆ ಸಮಾಜ ಸುಧಾರಣೆ ಸಾಧ್ಯ. ನಡೆನುಡಿ ಒಂದಾಗಿ ಜೀವನವನ್ನು ರೂಪಿಸಿಕೊಳ್ಳುವ ಮಹತ್ತರ ಕಾರ್ಯ ಎಲ್ಲರಿಂದ ನಡೆಯಬೇಕಾಗಿದೆ' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಾಸಭೆ ಜಿಲ್ಲಾ ಘಟಕದ ಅಧ್ಯಕ್ಷೆ ರತ್ನಪ್ರಭಾ ಬೆಲ್ಲದ, ಹಿರಿಯ ನ್ಯಾಯವಾದಿ ಎಂ.ಬಿ.ಜೀರಲಿ, ಡಾ.ಎಚ್.ಬಿ.ರಾಜಶೇಖರ, ಸಾಯಿ ಹಾಸ್ಪಿಟಲ್ ಡಾ.ಎಸ್.ಎಮ್.ದೊಡ್ಡಮನಿ, ಉದ್ದಿಮೆ ರಾಜು ಹತ್ತರಕಿ, ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಉತ್ಸವ ಕೇಂದ್ರ ಸಮಿತಿ ಅಧ್ಯಕ್ಷ ಗುರುದೇವ ನಂ. ಪಾಟೀಲ. ಉಪಾಧ್ಯಕ್ಷರಾದ ಸುಜೀತ ಮುಳಗುಂದ, ಪ್ರಸಾದ ಹಿರೇಮಠ, ರಾಜು ಟೋಪಣ್ಣನವರ, ಬಾಲಚಂದ್ರ ಬಾಗಿ, ವೀಣಾ ನಾಗಮೋತಿ, ರಕ್ಷಾ ದೇಗಿನಾಳ, ವೀರೇಶ ಅಪ್ಪಯ್ಯ ನವರಮಠ ಮೊದಲಾದವರು ಉಪಸ್ಥಿತರಿದ್ದರು.

ನೂರಾರು ಸಂಖ್ಯೆಯಲ್ಲಿ ಭಕ್ತರು ಬಸವಣ್ಣನವರ ಪ್ರತಿಮೆ ಹಾಗೂ ಬಾವುಟವನ್ನು ಹಿಡಿದುಕೊಂಡು ಬೈಕ್ ರ್‍ಯಾಲಿಯನ್ನು ಯಶಸ್ಸುಗೊಳಿಸಿದರು. ರ್‍ಯಾಲಿಯು ಲಿಂಗಾಯತ ಭವನ, ಶಿವಬಸವನಗರ ಮಾರ್ಗದಿಂದ ಪ್ರಾರಂಭವಾಗಿ ನಾಗನೂರ ಮಠ, ರಾಮದೇವ ಹೊಟೇಲ್, ಚನ್ನಮ್ಮ ವೃತ್ತ, ಗಣಪತಿ ಗಲ್ಲಿ, ಮಾರುತಿ ಗಲ್ಲಿ, ಬೋಗಾರ್ವೆಸ್, ಚಳಕಚೌಕ, ಕಪಿಲೇಶ್ವರ ಮೇಲ್ಸೇತುವೆ, ಶಿವಾಜಿ ಉದ್ಯಾನ, ಶಹಾಪೂರ ಮೂಲಕ ಬಸವೇಶ್ವರ ಸರ್ಕಲ್ (ಖಾಸಬಾಗ) ನಾಥಪೈ ಸರ್ಕಲ್, ಕೆಎಲ್‌ಇ ಬಿ.ಎಂ.ಕಂಕಣವಾಡಿ ಆಯುರ್ವೇದಿಕ ಕಾಲೇಜ ಮಾರ್ಗವಾಗಿ ಬಸವವೃತ್ತ(ಗೋವಾ ವೇಸ್)ವರೆಗೆ ಜರುಗಿತು.

# ಕರ್ನಾಟಕದ ಬಹುತೇಕ ಆಣೆಕಟ್ಟುಗಳ ನಿರ್ಮಾಪಕ ಎಸ್.ಜಿ.ಬಾಳೇಕುಂದ್ರಿ





ಬೆಳಗಾವಿ:06-ಕನ್ನಡ ಸಾಹಿತ್ಯ ಪರಿಷತ್ತು ಬೆಳಗಾವಿ ಜಿಲ್ಲೆಯ, ಕ.ಸಾ.ಪ 110ನೇ ಸಂಸ್ಥಾಪನಾ ದಿನಾಚರಣೆಯ ಹಾಗೂ ಕರ್ನಾಟಕದ ನೀರಾವರಿ ತಜ್ಞ ಇಂಜನೀಯರ್ ಎಸ್.ಜಿ.ಬಾಳೇಕುಂದ್ರಿ ಜನ್ಮ ದಿನದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ವತಿಯಿಂದ ಹಾಗೂ ಕನ್ನಡ ಕ್ಷೇಮಾಭಿವೃದ್ಧಿ ಸಂಯುಕ್ತ ಆಶ್ರಯದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ರವಿವಾರ ಸ್ಥಳ: ಕನ್ನಡ ಭವನದಲ್ಲಿ ಜರುಗಿತು. ನಿವೃತ್ತ ನ್ಯಾಯಾಧೀಶ ಉಲ್ಲಾಸ ಬಾಳೇಕುಂದ್ರಿ, ಇಂಜನೀಯರ್ ಎಸ್.ಜಿ.ಬಾಳೇಕುಂದ್ರಿ ಅವರ ಬದುಕು ಬರಹ ಕುರಿತು ಮಾತನಾಡಿ, ಆಲಮಟ್ಟಿ ಡ್ಯಾಂ 165ಕೋಟಿ ವೆಚ್ಚ ಬಚ್ಚಾವತ್ ಕಮೀಟಿ ಶಿಫಾರಸ್ಸು ಮಾಡಿದರು. 1977-88 ರ ಸಾಲಿನಲ್ಲಿ ಕಾಡಾ ನಿರ್ದೇಶಕರಾಗಿ ನಿವೃತ್ತರಾದರು. ಬೆಳಗಾವಿ ಜಿಲ್ಲೆಯ ಹಲವು ಸೇತುವೆ ನಿರ್ಮಾಣ ಕಾರ್ಯ ಭರದಿಂದ ನಿರ್ಮಾಣ ಕೈಗೊಂಡಿದ್ದರು. ಉತ್ತರ ಕರ್ನಾಟಕದ ಬಹುತೇಕ ನೀರಾವರಿ ಒದಗಿಸುವ ಹಿಡಕಲ್ ಡ್ಯಾಂ, ಆಲಮಟ್ಟಿ ಡ್ಯಾಂ, ನವಿಲು ತೀರ್ಥ ಡ್ಯಾಂ, ನಾರಾಯಣಪುರ ಆಣೆಕಟ್ಟು ನಿರ್ಮಾಣ ಮಾಡುವಲ್ಲಿ ಅವರ ಸೇವೆ ಸ್ಮರಣೀಯ ಎಂದರು.

ಇಂಜನೀಯರ್ ಬಸವರಾಜ ಚಿಟ್ಟರ ಮಾತನಾಡಿ ಎಸ್.ಜಿ.ಬಾಳೇಕುಂದ್ರಿ ಅವರು ನೀರಾವರಿ ಕ್ಷೇತ್ರದಲ್ಲಿ ಪ್ರಮುಖ ಕೊಡುಗೆ ನೀಡಿದ್ದಾರೆ. ಕರ್ನಾಟಕದಲ್ಲಿ ಲೋಕೋಪಯೋಗಿ ಇಲಾಖೆಯ ಮುಖ್ಯ ಸಿವಿಲ್ ಇಂಜನೀಯರ್ ಆಗಿ ಉತ್ತರ ಕರ್ನಾಟಕದ ಹಲವು ಪ್ರದೇಶಗಳಿಗೆ ನೀರಿನ ಅಭಾವ ನೀಗಿಸಿದರು ಎಂದರು.

ಕಸಾಪ ಬೆಳಗಾವಿ ಜಿಲ್ಲಾಧ್ಯಕ್ಷರಾದ ಶ್ರೀಮತಿ ಮಂಗಲಾ ಶ್ರೀ ಮೆಟಗುಡ್ಡ ಅಧ್ಯಕ್ಷತೆಯನ್ನು ವಹಿಸಿದ್ದರು. ಎಂ.ವೈ.ಮೆಣಸಿನಕಾಯಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹೇಮಾವತಿ ಸೊನೊಳ್ಳಿ ಸ್ವಾಗತಿಸಿದರು. ಶ್ರೀ.ವೀರಭದ್ರಪ್ಪ ಅಂಗಡಿ ಅವರು ಉಪನ್ಯಾಸಕರ ಮತ್ತು ಅತಿಥಿಗಳ ಪರಿಚಯವನ್ನು ಮಾಡಲಿದ್ದಾರೆ. ಮಲ್ಲಿಕಾರ್ಜುನ ಕೋಳಿ ಕಾರ್ಯಕ್ರಮ ನಿರೂಪಿಸಿದರು. ಶಿವಾನಂದ ತಲ್ಲೂರ ವಂದಿಸಿದರು. ಸುರೇಶ ಹಂಜಿ, ಡಾ.ಅವಿನಾಶ ಶಿಂಧಿಹಟ್ಟಿ, ಸಾಹಿತಿಗಳಾದ ಸ.ರಾ.ಸುಳಕೂಡೆ. ಪ್ರಾ.ಬಿ.ಬಿ.ಮಠಪತಿ, ಆರ್.ಬಿ.ಬನಶಂಕರಿ, ಹೇಮಾ ಸೊನೊಳ್ಳಿ, ಜಯಶೀಲಾ ಬ್ಯಾಕೋಡ, ಬೀನಾ ಕತ್ತಿ, ಕಸಾಪ ಸದಸ್ಯರು ಸಾಹಿತ್ಯ ಆಸಕ್ತರು ಉಪಸ್ಥಿತರಿದ್ದರು.

# ಲೋಕಸಭಾ ಸಾರ್ವತ್ರಿಕ ಚುನಾವಣೆ 2024 ಚುನಾವಣಾ ಸಿಬ್ಬಂದಿ ನಡೆ ಮತಗಟ್ಟೆ ಕಡೆ



ವಿಜಯಪುರ, ಮೇ.6 :- ವಿಜಯಪುರ ಮೀಸಲು (ಪ.ಜಾ) ಲೋಕಸಭಾ ಕ್ಷೇತ್ರಕ್ಕೆ ಮೇ. 7ರಂದು ಮತದಾನ ನಡೆಯಲಿರುವ ಹಿನ್ನಲೆಯಲ್ಲಿ ಸೋಮವಾರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ ವಿಧಾನಸಭಾ ಕ್ಷೇತ್ರದ ಮಸ್ಟರಿಂಗ್ ಕೇಂದ್ರಗಳಿಂದ ವಿದ್ಯುನ್ಮಾನ (ಇವಿಎಂ) ಮತಯಂತ್ರ ಹಾಗೂ ಇನ್ನಿತ್ತರ ಸಾಮಗ್ರಿ ಪಡೆದ ಚುನಾವಣಾ ಸಿಬ್ಬಂದಿ ತಮಗೆ ಸೂಚಿಸಿರುವ ಮತಗಟ್ಟೆಯತ್ತ ಕಡೆ ಸಾಗಿದರು. ಸೋಮವಾರ ಬೆಳಗ್ಗೆಯಿಂದಲೆ ಮಸ್ಟರಿಂಗ್ ಕೇಂದ್ರಗಳಲ್ಲಿ ಚುನಾವಣಾ ಸಿಬ್ಬಂದಿ ಹಾಜರಿದ್ದು ತಮ್ಮ ಮತಗಟ್ಟೆಗೆ ಇವಿಎಂ ಯಂತ್ರ, ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್, ವಿವಿ ಪ್ಯಾಟ್ ಸೇರಿದಂತೆ ಇನ್ನಿತರ ಸಾಮಗ್ರಿಗಳನ್ನು ಸಹಾಯಕ ಚುನಾವಣಾಧಿಕಾರಿಗಳಿಂದ ಪಡೆಯುವ ದೃಶ್ಯ ಕಂಡು ಬಂದಿತುಮುದ್ದೇಬಿಹಾಳ, ದೇವರ ಹಿಪ್ಪರಗಿ, ಬಸವನ ಬಾಗೇವಾಡಿ, ಬಬಲೇಶ್ವರ, ವಿಜಯಪುರ ನಗರ, ನಾಗಠಾಣ, ಸಿಂದಗಿ, ಇಂಡಿ ಸೇರಿ ಎಲ್ಲಾ ಕ್ಷೇತ್ರದ ಮಸ್ಟರಿಂಗ್ ಕೇಂದ್ರದಲ್ಲಿ ಅಗತ್ಯವಾದ ಸಿದ್ಧತೆಯಲ್ಲಿ ತೊಡಗಿರುವ ಸಿಬ್ಬಂದಿ ಹಾಜರಿದ್ದಿದ್ದು ಕಾಣಬಹುದಾಗಿತ್ತು. ಬೇಸಿಗೆಯ ಬಿಸಿಗಾಳಿ ಶಾಖವಿರುವ ಕಾರಣ ಪೋಲಿಂಗ್ ಸಿಬ್ಬಂದಿಗಳ ಆರೋಗ್ಯ ಬಗ್ಗೆಯೂ ಕಾಳಜಿ ವಹಿಸಲು ಚುನಾವಣಾ ಆಯೋಗ ಸೂಚಿಸಿದ್ದು, ಓಆರ್‌ಎಸ್ ಪಾಕಿಟ್, ಪ್ರಥಮ ಚಿಕಿತ್ಸಾ ಕಿಟ್ ಸಹ ಈ ಸಂದರ್ಭದಲ್ಲಿ ನೀಡಲಾಯಿತು. ಅಲ್ಲದೇ ಆರೋಗ್ಯ ಸಿಬ್ಬಂದಿ ಸಹ ಉಪಸ್ಥಿತರಿದ್ದರು.ಮಹಿಳಾ ಸಿಬ್ಬಂದಿಗಳ 10 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಶಿಶು ಪಾಲನಾ ಕೇಂದ್ರಗಳ ವ್ಯವಸ್ಥೆ ಕಲ್ಪಿಸಲಾಗಿತ್ತು. ಪೋಲಿಂಗ್ ಸಿಬ್ಬಂದಿಗೆ ಮಸ್ಟರಿಂಗ್ ಸೆಂಟರ್‌ನಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ



ವಿಜಯಪುರ, ಮೇ.6 :- ನಾಗಠಾಣ ಹಾಗೂ ವಿಜಯಪುರ ನಗರ ಮತಕ್ಷೇತ್ರದ ಮಸ್ಟರಿಂಗ್ ಕೇಂದ್ರ ಇರುವ ಸೈನಿಕ ಶಾಲೆಗೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಮಸ್ಟರಿಂಗ್ ಕಾರ್ಯ ಸುಸೂತ್ರವಾಗಿ ನಡೆಯುತ್ತಿರುವ ಬಗ್ಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ಲೋಕಸಭಾ ಚುನಾವಣೆ; ಸುಸೂತ್ರವಾಗಿ ನಡೆದ ಮಸ್ಟರಿಂಗ್ ಕಾರ್ಯ



ಗದಗ ಮೇ 6: ಲೋಕಸಭಾ ಚುನಾವಣೆ ಸಂಬಂಧ ಮಸ್ಟರಿಂಗ್ ಕಾರ್ಯವು ಶಿರಹಟ್ಟಿಯ ಎಫ್.ಎಂ.ಡಬಾಲಿ ಪಿ.ಯು. ಕಾಲೇಜು, ಗದಗ ನಗರದ ಗುರುಬಸವ ಸಿಬಿಎಸ್‌ಇ ಶಾಲೆ, ರೋಣದ ಡಿ ಪೌಲ್ ಅಕಾಡೆಮಿ ಹಾಗೂ ನರಗುಂದದ ಸರ್ಕಾರಿ ಎಂಜನಿಯರಿಂಗ್ ಕಾಲೇಜು ಇಲ್ಲಿ ಸೋಮವಾರ ಸುಸೂತ್ರವಾಗಿ ನಡೆಯಿತು. ಲೋಕಸಭಾ ಚುನಾವಣೆ ಸಂಬಂಧ ಜಿಲ್ಲೆಯ 961 ಮತಗಟ್ಟೆಗಳಿಗೆ ನಿಯೋಜಿಸಿರುವ ಎಲ್ಲಾ ಹಂತದ ಮತಗಟ್ಟೆ ಅಧಿಕಾರಿಗಳು ಮಸ್ಟರಿಂಗ್ ಕೇಂದ್ರಕ್ಕೆ ಆಗಮಿಸಿ ತಮಗೆ ಹಂಚಿಕೆಯಾದ ಮತಗಟ್ಟೆಯ ಸಂಖ್ಯೆಯನ್ನು ತಿಳಿದುಕೊಂಡು ನಿಗದಿಪಡಿಸಿದ ಕೌಂಟರ್‌ಗೆ ತೆರಳಿ ತಮ್ಮ ಮತಗಟ್ಟೆಗೆ ನಿಯೋಜಿಸಿರುವ ಮತಗಟ್ಟೆ ಅಧಿಕಾರಿಗಳನ್ನು ಪರಿಚಯ ಮಾಡಿ ಕೊಂಡು ಪರಸ್ಪರ ಚರ್ಚಿ ಸಿದರು.

ಬಳಿಕ ಮತಗಟ್ಟೆ ಅಧಿಕಾರಿಗಳು ಸೆಕ್ಟರ್ ಅಧಿಕಾರಿಗಳಿಂದ ಚುನಾವಣೆ ಸಂಬಂಧ ಮಾಹಿತಿ ಪಡೆದು, ಮತಗಟ್ಟೆ ಕಾರ್ಯನಿರ್ವಹಣೆಯ ಸಾಮಗ್ರಿ ಗಳನ್ನು ಪಡೆದರು. ಚುನಾವಣಾ ಸಾಮಾನ್ಯ ವೀಕ್ಷಕರಾದ ಆದೇಶ್ ಟೈಟಮಾರೆ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ ವೀಕ್ಷಿಸಿ ಮಾಹಿತಿ ಪಡೆದರು.ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಜಿ.ಪಂ.ಸಿಇಒ ಎಸ್.ಭರತ್, ಹೆಚ್ಚುವರಿ ಜಿಲ್ಲಾಧಿಕಾರಿ ಸುರೇಖಾ ಇತರರು ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ ವೀಕ್ಷಿಸಿದರು. ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಗದಗ ನಗರ ಸೇರಿದಂತೆ ವಿವಿಧ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಮತಗಟ್ಟೆ ಕೇಂದ್ರದಲ್ಲಿ ನಿರ್ವಹಿಸಬೇಕಾದ ಕಾರ್ಯ ವಿಧಾನದ ಬಗ್ಗೆ ಹಲವು ಮಾರ್ಗದರ್ಶನ ನೀಡಿದರು. ಲೋಕಸಭಾ ಚುನಾವಣೆ ಸಂಬಂಧ ಜಿಲ್ಲೆಯಲ್ಲಿ 189 ಮಾರ್ಗಗಳನ್ನು ಗುರುತಿಸಲಾಗಿದ್ದು, ಈ ಮಾರ್ಗದಲ್ಲಿ 132 ಕೆಎಸ್‌ಆರ್ಟಿಸಿ ಬಸ್ಸುಗಳು, 82 ಜೀಪು, 22 ಮಿನಿ ಬಸ್‌ಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು. ಮತಗಟ್ಟೆ ಅಧಿಕಾರಿಗಳಿಗೆ ಆರೋಗ್ಯ ಕಿಟ್, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಅವರು ಮಾತನಾಡಿ ಜಿಲ್ಲೆಯಲ್ಲಿ ಶಾಂತಿಯುತವಾಗಿ ಚುನಾವಣೆ ನಡೆಸಲು ಅಗತ್ಯ ಬಂದೋಬಸ್ತ್ ಮಾಡಲಾಗಿದೆ. ಸುಮಾರು 2000 ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ ಎಂದು ಹೇಳಿದರು.

ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿ.ಪಂ.ಸಿಇಒ ಎಸ್.ಭರತ್ ಅವರು ಮಾತನಾಡಿ ಜಿಲ್ಲೆಯಲ್ಲಿ 35 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 20 ಸಖಿ ಬೂತ್‌ಗಳು, ತಲಾ 4 ಸಾಂಪ್ರದಾಯಿಕ, ವಿಶೇಷ ಚೇತನ ಮತಗಟ್ಟೆಗಳು, ಯುವ ಮತದಾರರ ಮತಗಟ್ಟೆಗಳು ಹಾಗೂ ಥೀಮ್ ಬೇಸಡ್ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದರು. ಈ ಬಾರಿ ಶೇಕಡಾವಾರು ಮತದಾನ ಹೆಚ್ಚಳಕ್ಕೆ ಸ್ವೀಪ್ ಸಮಿತಿ ವತಿಯಿಂದ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶೇಕಡಾ ವಾರು ಮತದಾನ ಹೆಚ್ಚಳಕ್ಕೆ ಶ್ರಮಿಸಲಾಗಿದೆ ಎಂದರು. ಉಪ ವಿಭಾಗಾಧಿಕಾರಿ ವೆಂಕಟೇಶ ನಾಯ್ಕ, ಇತರರು ಇದ್ದರು.

# ಕರ್ನಾಟಕ ಸಾಂಸ್ಕೃತಿಕ ನಾಯಕ ಬಸವಣ್ಣನವರ ಸಂದೇಶ ವಿಶ್ವ ಸಂದೇಶವಾಗಿದೆ : ಡಾ ರಾಜೇಂದ್ರ ಗಡಾದ





ಗದಗ-5 : ಕರ್ನಾಟಕ ಸಾಂಸ್ಕೃತಿಕ ನಾಯಕ ಎಂದು ಗುರುತಿಸಿಕೊಂಡಿರುವ ವಿಶ್ವಗುರು ಬಸವಣ್ಣನವರ ಧರ್ಮ ವಿಶ್ವಧರ್ಮ. ಅಂತೆಯೇ ಅವರ ಸಂದೇಶ ವಿಶ್ವ ಸಂದೇಶ; ಆ ಧರ್ಮ ವಿಶ್ವ ಸಾಧ್ಯವಾದುದು, ವಿಶ್ವ ವೇದ್ಯವಾದುದು, ಅದಕ್ಕೆ ಎಲ್ಲೆ ಕಟ್ಟುಗಳಿಲ್ಲ ನಾಮ ಸೀಮೆಗಳಿಲ್ಲ ಅವರ ದೃಷ್ಟಿಯಲ್ಲಿ ಮೃದುವಚನಗಳೇ ಸಕಲ ಜಪತಪಂಗಳು ಸದುವಿನಯವೇ ಸದಾಶಿವನೊಲುಮೆ. ಬಸವಣ್ಣನವರ ಧರ್ಮ ನೀತಿ ಮೃದುವಚನ, ಸದುವಿನಯ, ಸದಾಚಾರಗಳಲ್ಲಿ ಅಡಗಿದೆ. ಬಸವಣ್ಣ ಕ್ರಾಂತಿದರ್ಶಿ, ತ್ರಿಕಾಲ ಜ್ಞಾನಿ ,ಭೂತ ವರ್ತಮಾನ ಭವಿಷ್ಯತ್ಕಾಲಗಳಲ್ಲಿ ಜಗತ್ತಿನ ಅದರಲ್ಲಿಯೂ ಭಾರತದ ಪರಿಸ್ಥಿತಿ ಹೇಗಿರುತ್ತದೆ ಎನ್ನುವುದನ್ನು ಅವರು ಬಲ್ಲವರಾಗಿದ್ದರು ಅವರು ಸಮಗ್ರ ಕ್ರಾಂತಿಯ ಹರಿಕಾರರು ಎಂದು ಅಖಿಲ ಭಾರತ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾದ ಡಾ ರಾಜೇಂದ್ರ ಎಸ್ ಗಡಾದ ಅವರು ಹೇಳಿದರು. ನಗರದ ಬಸವ ದಳ, ತಾಲೂಕ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಜಾಗತಿಕ ಲಿಂಗಾಯತ ಮಹಾಸಭೆಯ ಆಶ್ರಯದಲ್ಲಿ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಏರ್ಪಾಡಾಗಿದ್ದ ಬಸವ ದಳದ 1592 ನೆಯ ಶರಣ ಸಂಗಮದಲ್ಲಿ "ಕರ್ನಾಟಕ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ 919ನೇ ಜಯಂತಿ" ಕುರಿತು ಉಪನ್ಯಾಸ ನೀಡುತ್ತಾ, ಮೇಲಿನಂತೆ ಮಾತನಾಡಿದ ಡಾ. ಗಡಾದ ಅವರು ಮುಂದುವರಿದು ಕರ್ನಾಟಕ ಸರ್ಕಾರ ಯಾವ ಯಾವ ಕಾರಣಗಳಿಂದಾಗಿ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದೆ ಎಂಬುದನ್ನು ಅವರ ಜೀವನ ಸಾಧನೆ ಹಾಗೂ ವಿವಿಧ ಮಗ್ಗುಲಗಳನ್ನು ಪರಿಚಯಿಸುವ ಮೂಲಕ ಸಮರ್ಥನೆ ನೀಡಿದರು .

ಕಾಲ್ ಮಾರ್ಕ್ಸ್ ಮಾರ್ಟಿನ್ ಲೂಥರ್ ಕಿಂಗ್ ಮೊದಲಾದವರಿಗೂ ಮುಂಚೆ ಜಗತ್ತಿಗೆ ಮೊದಲ ಪಾರ್ಲಿಮೆಂಟನ್ನು ರಚಿಸಿಕೊಟ್ಟವರು ಭಕ್ತಿ ಭಂಡಾರಿ ಬಸವಣ್ಣನವರು ಸುಮಾರು 850 ವರ್ಷಗಳ ಹಿಂದೆಯೇ ಕಲ್ಯಾಣದಲ್ಲಿ ವಚನ ಕ್ರಾಂತಿ ಚಳುವಳಿಗಳ ಮೂಲಕ ಬಹುದೊಡ್ಡ ಕ್ರಾಂತಿಕಾರಕ ಬದಲಾವಣೆಯ ನೇತೃತ್ವವನ್ನು ತೆಗೆದುಕೊಂಡು ಯಶಸ್ವಿಯಾಗಿ, ಸಮಾನತೆಯ ಸೌಧವನ್ನು ಕಟ್ಟಿದರು. ಈ ದೇಶದಲ್ಲಿ ಹುಟ್ಟಿದ ಅನೇಕ ಸಂತರು. ಸಾಧುಗಳು ಪುರೋಹಿತಶಾಹಿಗೆ ಹೆದರಿ ಅದನ್ನ ತಲೆಯ ಮೇಲೆ ಹೊತ್ತುಕೊಂಡು ಮೆರೆದರೆ, ಬಸವಣ್ಣನವರೊಬ್ಬರೇ ಅದನ್ನ ಸಾರಾಸಗಟಾಗಿ ನಾಶ ಮಾಡಬೇಕೆಂದು ಹೊರಟ ಧರ್ಮವೀರರು. ವರ್ಣಾಶ್ರಮ ಧರ್ಮ, ಜಾತೀಯತೆ, ಅಸ್ಪೃಶ್ಯತೆ ಮೌಢ್ಯ ಪರಂಪರೆ ಮೇಲೆ ಸಮರಸಾರಿ ಸಮಾಜದಲ್ಲಿ ಭ್ರಾತೃತ್ವ ನೆಲೆಯೂರಲು ಹೇಗೆ ಕಾರಣರಾದರು ಎಂಬುದನ್ನು ಅವರದೇ ಆದ ಅನೇಕ ವಚನಗಳ ಮೂಲಕ ವಿಶ್ಲೇಷಣೆಯನ್ನು ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಾಮಾಜಿಕ ಕಾರ್ಯಕರ್ತ ಬಸವರಾಜ ಹಿರೇಹಡಗಲಿ ಹಾಗೂ ಶ್ರೀಮತಿ ನೀಲಕ್ಕ ಮಳಲಿ ಅವರು ಸಾಂದರ್ಭಿಕವಾಗಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಿ. ಕೆ. ಕರಿಗೌಡರ ಅವರು ವಹಿಸಿಕೊಂಡು ಬಸವಣ್ಣನವರು

ಈ ನಾಡು ಕಂಡ ಕ್ರಾಂತಿಕಾರಿಗಳಲ್ಲಿ ಒಬ್ಬರಾಗಿದ್ದು, ಅವರು ಮಾಡಿರುವ ಸಾಧನೆಯನ್ನು ಯಾವ ನಿಟ್ಟಿನಿಂದ ನೋಡಿದರೂ ಅದು ಅನುಪಮವಾಗಿದೆ ಅವರ ಕೊಡುಗೆ ಈ ವಿಶ್ವಕ್ಕೆ ಅಮೋಘವಾಗಿದೆ ವಚನ ಸಾಹಿತ್ಯವಂತು ತುಂಬಾ ಶ್ರೇಷ್ಠವಾಗಿದೆ ಎಂದರು. ಆರಂಭದಲ್ಲಿ ಕುಮಾರಿ ಭಕ್ತಿ ಆಲತಗಿ ವಚನ ಪಠಣ ಮಾಡಿದರೆ, ವಚನ ಪ್ರಾರ್ಥನೆಯನ್ನು ಶರಣೆ ಗಂಗಮ್ಮ ಹೂಗಾರ ಮಾಡಿದರು. ಶರಣ ಎಂ. ಬಿ. ಲಿಂಗಧಾಳ ಅವರು ಸರ್ವರನ್ನು ಸ್ವಾಗತಿಸಿದರು. ಶರಣ ಸಾಹಿತ್ಯ ಪರಿಷತ್ ತಾಲೂಕ್ ಅಧ್ಯಕ್ಷರಾದ ಶ್ರೀ ಪ್ರಕಾಶ್ ಅಸುಂಡಿ ಅವರು ಪ್ರಸ್ತಾವಿಕ ನುಡಿಗಳನ್ನು ನುಡಿದರು ಶರಣ ಶ್ರೀ ಎಸ್. ಎ. ಮುಗದರವರು ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಶ್ರೀಮತಿ ಗೌರಕ್ಕ ಬಡಿಗಣ್ಣವರ ಶರಣು ಸಮರ್ಪಣೆ ಗೈದರು ನಂತರ ವಚನ ಮಂಗಲವಾಯಿತು.

ಕಾರ್ಯಕ್ರಮದಲ್ಲಿ ಶರಣರಾದ ಎಸ್. ಎನ್. ಹಕಾರಿ, ಎನ್. ಎಚ್. ಹಿರೇಸಕ್ಕರಗೌಡ್ರ, ಬಿ. ವಿ. ಕಾಮಣ್ಣವರ, ಎನ್. ಎಸ್. ಬಡಿಗಣ್ಣವರ, ಡಾ. ಆರ್. ಎಸ್. ದಾನರಡ್ಡಿ, ಮಲ್ಲಣ್ಣ ಜಿನಗಾ, ಮಹಾಂತೇಶ ಅಂಗಡಿ, ಮಂಜುನಾಥ ಅಸುಂಡಿ,

ಶರಣು ಅಂಗಡಿ, ಅಲ್ಲಮ ಬಡಿಗಣ್ಣವರ, ಶರಣೆಯರಾದ ಸರೋಜಕ್ಕ ಲಿಂಗಧಾಳ, ಲಕ್ಷ್ಮೀ ಅಂಗಡಿ, ಮಂಗಳಕ್ಕ ಕಾಮಣ್ಣವರ, ಮಂಜುಳಾ ಹಾಸಿಲಕರ, ಸಹನಾ ಆಲತಗಿ, ರೇಣುಕಾ ಹಾಸಿಲಕರ, ಶಿಲ್ಪಾ ಬಡಿಗಣ್ಣವರ, ಭಾಗ್ಯಶ್ರೀ ಬಡಿಗಣ್ಣವರ ಮುಂತಾದವರು ಉಪಸ್ಥಿತರಿದ್ದರು.

GADI KANNADIGA,kannada daily, printed, published , edited, & woned by murugesh b.shivapuji ,printed ,plot no:12,sy no:174/3b,press colony,kuvempu nagar, post:hindalaga-591108,Tq & Dt:belgaum, And published at plot no:12,sy no:174/3b,press colony,kuvempu nagar,post:hindalaga-591108,Tq & Dt:belgaum, karnataka, RNI NO:KAR KAN/2003/10452. Permission to post at Belagavi, Kacheri post office Belagavi. No:PMG/KA/NK/BM/743/24-26